# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:Commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:-ಪಪೂಶಿಇ/ಶೈಶಾ/ಗ್ರಾ.ವಿ.ಪ್ರೋ/2017-2018 ದಿನಾಂಕ:21/08/2017

ಸುತ್ತೋಲೆ

ವಿಷಯ:- ಪದವಿ ಪೂರ್ವ ಶಿಕ್ಷಣ ದಿಂದ ವಂಚಿತರಾಗಿರುವ ಗ್ರಾಮೀಣ ಭಾಗದ ಅರ್ಹ ವಿದ್ಯಾರ್ಥಿಗಳು ಪಿಯುಸಿ ತರಗತಿಗೆ ಪ್ರವೇಶ ಪಡೆಯಲು ಪ್ರೋತ್ಸಾಹಿಸುವ ಬಗ್ಗೆ

ಉಲ್ಲೇಖ:- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಬೆಂಗಳೂರು ಇವರ ಇ-ಮೇಲ್ ಸಂದೇಶ ದಿನಾಂಕ 22.07.2017

------

ಪದವಿ ಪೂರ್ವ ಶಿಕ್ಷಣವನ್ನು ಗ್ರಾಮೀಣ ಭಾಗದಲ್ಲಿನ ಎಲ್ಲಾ ಯುವ ಜನರು ಪಡೆಯುವ ನಿಟ್ಟಿನಲ್ಲಿ ಸರ್ಕಾರ ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ.ಇನ್ನೂರು ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದು, ಒಬ್ಬರೂ ಸಹ ಪಿಯುಸಿ ತರಗತಿಗೆ ಸೇರದಿರುವ ಪಾಸಾಗದಿರುವ ಹಳ್ಳಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ ರಾಜ್ ಇಲಾಖೆ ಗುರುತಿಸಿದ್ದು, ಸದರಿ ಹಳ್ಳಿಗಳಲ್ಲಿ ಎಸ್.ಎಸ್.ಎಲ್.ಸಿ (10ನೇ ತರಗತಿ) ಪಾಸಾದ ವಿದ್ಯಾರ್ಥಿಗಳಿದ್ದು, ಪದವಿ ಪೂರ್ವ ಶಿಕ್ಷಣಕ್ಕೆ ಪ್ರವೇಶಾತಿ ಪಡೆಯಲು ಮುಂದೆ ಬಾರದ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಮಧ್ಯದಲ್ಲಿ ಮೊಟಕುಗೊಳಿಸಿರುವವರು ಪದವಿ ಪೂರ್ವ ಶಿಕ್ಷಣದಲ್ಲಿ ಅಧ್ಯಯನ ಮುಂದುವರೆಸುವಂತೆ, ಪ್ರೋತ್ಸಾಹಿಸಿ ಅವರಿಗಿರುವ ಅಡಚಣೆಗಳನ್ನು ನಿವಾರಿಸಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಬೇಕಾಗಿರುತ್ತದೆ

ಈ ಕಾರ್ಯಕ್ಕೆ ಸದರಿ ಹಳ್ಳಿಗಳಿಗೆ ಸಮೀಪವಿರುವ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಹಾಗೂ ಉಪನ್ಯಾಸಕರನ್ನು ಬಳಸಿಕೊಂಡು ಸಮೀಕ್ಷೆ ಮಾಡಬೇಕಿದೆ.

ಜಿಲ್ಲಾ ಉಪ ನಿರ್ದೇಶಕರು ಸಂಬಂಧಿಸಿದ ಪ್ರಾಂಶುಪಾಲರಿಂದ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಮಾಹಿತಿ ಸಂಗ್ರಹಿಸಿ ಕ್ರೋಢೀಕರಿಸಿ ವರದಿಯೊಂದಿಗೆ ದಿನಾಂಕ 30.08.2017 ರೊಳಗೆ ಉಪ ನಿರ್ದೇಶಕರು (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ರವರಿಗೆ puemhrd@gmail.com.ಗೆ ಇ-ಮೇಲ್ ಮೂಲಕ ಕಳುಹಿಸಲು ಸೂಚಿಸಿದೆ.

21/8

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,
ರವರ ಮುಖಾಂತರ ಕಾಲೇಜಿನ ಪ್ರಾಂಶುಪಾಲರಿಗೆ-ತುರ್ತು ಕ್ರಮಕ್ಕಾಗಿ

ಪ್ರತಿಗಳು

1. ಜಂಟಿ ನಿರ್ದೇಶಕರು(ಆಡಳಿತ, ಮಾ&ಅನು, ಶೈಕ್ಷಣಿಕ, ಪರೀಕ್ಷೆ) -ಮಾಹಿತಿಗಾಗಿ.
2. ನಿದೇಶಕರ ಆಪ್ತಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು-ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು, ಇ- ಆಡಳಿತ. - ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟನೆಗಾಗಿ.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:Commissioner.pue@gmail.com. * Ph. No.23361857, 23361858* Fax-23361852

## ಅನುಬಂಧ-1

ಜಿಲ್ಲೆ____________ ತಾಲ್ಲೂಕು ಹೆಸರು ____________ ಗ್ರಾಮಪಂಚಾಯಿತಿ ____________

| ಕ್ರ ಸ | ಹಳ್ಳಿಯ ಹೆಸರು | ಹಳ್ಳಿಯ ಕೋಡ್ | ವಿದ್ಯಾರ್ಥಿ ಹೆಸರು & ವಿಳಾಸ | ವಯಸ್ಸು | ಪಿಯುಸಿಗೆ ಸೇರದಿರಲು ಕಾರಣ | ಷರಾ |
|---|---|---|---|---|---|---|
| | | | | | | |

ಪ್ರಾಂಶುಪಾಲರ ಸಹಿ
ಹೆಸರು ಮತ್ತು ವಿಳಾಸ
ಮೊಬೈಲ್ ಸಂಖ್ಯೆ

ಉಪನ್ಯಾಸಕರ ಸಹಿ
ಹೆಸರು ಮತ್ತು ಮೊಬೈಲ್ ಸಂಖ್ಯೆ

"ದೃಢೀಕರಿಸಿದೆ"

ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
------------ ಜಿಲ್ಲೆ.